# ಸೂಪರ್ ಸ್ಟಾರ್ ಡಿ ಲಿಗ್ಟ್

ಹಾಲೆಂಡ್‌ನ ಉದಯೋನ್ಮುಖ ವೃತ್ತಿಪರ ಫುಟ್‌ಬಾಲ್ ಆಟಗಾರ ಮಾಟಿಜ್ಸ್ ಡಿ ಲಿಗ್ಟ್, ಯೂರೋಪಿಯನ್ ಫುಟ್‌ಬಾಲ್‌ನ ಸದ್ಯದ ಹಾಟ್ ಸೆನ್ಸೇಷನ್, ಯುವ ಸೂಪರ್‌ಸ್ಟಾರ್. ಕಳೆದ ವಾರ ಪ್ರತಿಷ್ಠಿತ ಜುವೆಂಟಸ್ ಕ್ಲಬ್ ಜೊತೆಗೆ ಆಟವಾಡಲು ಒಪ್ಪಂದ ಮಾಡಿಕೊಂಡ. ಅದಕ್ಕೆ ಈತ ಪಡೆದ ಮೊತ್ತ 75 ದಶಲಕ್ಷ ಯೂರೋ! ಅಂದಾಜು 48.25 ದಶಲಕ್ಷ ಡಾಲರ್. ಕಳೆದ ಹತ್ತು ವರ್ಷಗಳಲ್ಲಿ ಆಟಗಾರನೊಬ್ಬನನ್ನು ಖರೀದಿಸಲು ಫುಟ್‌ಬಾಲ್ ಕ್ಲಬ್‌ವೊಂದು ನೀಡಿದ ಅತಿದೊಡ್ಡ ಮೊತ್ತವಿದು ಎನ್ನುವುದೀಗ ದಾಖಲೆ. 19ರ ಹರೆಯದಲ್ಲೇ ಇಷ್ಟು ದೊಡ್ಡ ಮೊತ್ತದ ಕಾಂಟ್ರಾಕ್ಟ್ ಅಂದರೆ ಅದು ನಿಜಕ್ಕೂ ವಿಶೇಷವೇ.

ಯೂರೋಪಿಯನ್ ಕ್ಲಬ್ ಟೂರ್ನಿಗಳಲ್ಲಿ ಮ್ಯಾಂಚೆಸ್ಟರ್ ಯುನೈಟೆಡ್, ಸೇಂಟ್ ಜರ್ಮನ್, ಬಾರ್ಸಿಲೋನಾ ಮುಂತಾದ ಕ್ಲಬ್‌ಗಳಿಗೆ ಸದಾ ತೀವ್ರ ಸ್ಪರ್ಧೆಯೊಡ್ಡುವ ಎದುರಾಳಿ. ಜುವೆಂಟಸ್‌ನ ಸೂಪರ್‌ಸ್ಟಾರ್ ಕ್ರಿಶ್ಚಿಯಾನೊ ರೊನಾಲ್ಡೊ ತನ್ನನ್ನು ಜುವೆಂಟಸ್ ಕ್ಲಬ್‌ಗೆ ಆಹ್ವಾನಿಸಿದಾಗ ಡಿ ಲಿಗ್ಟ್‌ಗೆ ಸ್ವರ್ಗ ಮೂರೇ ಗೇಣು. 'ರೊನಾಲ್ಡೊ ಕೇಳುವುದಕ್ಕೆ ಮುನ್ನವೇ ನನಗೆ ಜುವೆಂಟಸ್ ಸೇರಬೇಕೆಂಬ ಮನಸ್ಸಿತ್ತು. ಏಕೆಂದರೆ ಇಟಲಿಯ ಫುಟ್‌ಬಾಲ್ ಶೈಲಿ ನನಗೆ ಹೆಚ್ಚು ಒಗ್ಗುತ್ತದೆ' ಎಂದಿದ್ದಾನೆ ನೆದರ್‌ಲೆಂಡ್ ರಾಷ್ಟ್ರೀಯ ತಂಡದ ಈ ಆಟಗಾರ.



ಡಿ ಲಿಗ್ಟ್ ಅಜಾಕ್ಸ್ ಕ್ಲಬ್‌ನ ಶೋಧ. ಅಜಾಕ್ಸ್ ಜೂನಿಯರ್ ತಂಡದ ನಾಯಕನಾಗಿದ್ದವ. ಪ್ರತಿಭೆಯಿಂದ ಮೇಲಕ್ಕೆ ಬಂದು ಸೀನಿಯರ್ ತಂಡಕ್ಕೆ ಸೇರಿದ. ಒಂದೇ ವರ್ಷದಲ್ಲಿ ತಂಡದ ನಾಯಕನೂ ಆದ. ಕಳೆದ ಹತ್ತು ವರ್ಷಗಳಿಂದ ಅಜಾಕ್ಸ್‌ನಲ್ಲಿರುವ ಡಿ ಲಿಗ್ಟ್, ಕಳೆದ ಎರಡು ಸೀಸನ್‌ಗಳಲ್ಲಿ ತನ್ನ ಶಕ್ತಿಶಾಲಿ ಡಿಫೆನ್ಸ್ ಆಟದ ಮೂಲಕ ಇಡೀ ವಿಶ್ವದ ಗಮನ ಸೆಳೆದಿದ್ದಾನೆ. ಈತನ ನಾಯಕತ್ವದಲ್ಲಿ ಅಜಾಕ್ಸ್ ಕಳೆದ ವರ್ಷ ಚಾಂಪಿಯನ್ಸ್ ಲೀಗ್‌ನ ಸೆಮಿಫೈನಲ್ ಪ್ರವೇಶಿಸಿ ಗಮನ ಸೆಳೆಯಿತು. ಕಳೆದ ಸೀಸನ್‌ನಲ್ಲಿ 18 ಚಾಂಪಿಯನ್ ಲೀಗ್ ಪಂದ್ಯಗಳಲ್ಲಿ 17ರಲ್ಲಿ 90 ನಿಮಿಷವೂ ಈತ ಆಟವಾಡಿದ್ದಾನೆ. ಮೂರು ಗೋಲು ಕೂಡಾ ಹೊಡೆದಿದ್ದಾನೆ.

2017ರ ಯುಇಎಫ್‌ಎ ಯುರೋಪಾ ಲೀಗ್ ಫೈನಲ್‌ನಲ್ಲಿ ಅಜಾಕ್ಸ್ ತಂಡದ ಪರವಾಗಿ ಮ್ಯಾಂಚೆಸ್ಟರ್ ಯುನೈಟೆಡ್ ವಿರುದ್ಧ ಆಡಿದಾಗ ಡಿ ಲಿಗ್ಟ್, ಮೇಜರ್ ಯೂರೋಪಿಯನ್ ಟೂರ್ನಿಯಲ್ಲಿ ಆಡಿದ ಜಗತ್ತಿನ ಅತ್ಯಂತ ಕಿರಿಯ ಆಟಗಾರ ಎಂದು ದಾಖಲೆ ಬರೆದ. 2018ರ ಡಿಸೆಂಬರ್‌ನಲ್ಲಿ 'ಗೋಲ್ಡನ್ ಬಾಯ್' ಪ್ರಶಸ್ತಿ ಗೆದ್ದ ಜಗತ್ತಿನ ಮೊದಲ ರಕ್ಷಣಾ ಆಟಗಾರ ಎನ್ನಿಸಿದ. ಡಿ ಲಿಗ್ಟ್ ಡಿಫೆನ್ಸ್ ಆಟಗಾರನಾದರೂ ಸಂದರ್ಭ ಬಂದಾಗ ಮುನ್ನುಗ್ಗಿ ಗೋಲು ಗಳಿಸಿದ್ದುಂಟು. ಕ್ಲೀನ್ ಟ್ಯಾಕ್ಲಿಂಗ್, 6.2 ಅಡಿ ಎತ್ತರ, ದೈಹಿಕವಾಗಿ ಬಲಶಾಲಿ, ಸ್ಪೀಡ್ ಮತ್ತು ಕರಾರುವಾಕ್ಕಾದ ಪಾಸ್ ಈತನಿಗೆ ಸ್ಟಾರ್‌ವ್ಯಾಲ್ಯೂ ತಂದುಕೊಟ್ಟಿದೆ.

ಹಾಗೆಂದೇ ಈ ಸೀಸನ್‌ನಲ್ಲಿ ಈತನನ್ನು ತಮ್ಮ ಕ್ಲಬ್‌ಗೆ ಸೆಳೆದುಕೊಳ್ಳಲು ಹಲವು ಪ್ರತಿಷ್ಠಿತ ಕ್ಲಬ್‌ಗಳು ಭಗೀರಥ ಯತ್ನ ನಡೆಸಿದವು. ಬಾರ್ಸಿಲೋನಾ ಮತ್ತು ಪ್ಯಾರಿಸ್ ಸೇಂಟ್ ಜರ್ಮನ್ ಕ್ಲಬ್‌ಗಳಿಂದಲೂ ಈತನಿಗೆ ದೊಡ್ಡ ಮೊತ್ತದ ಆಫರ್ ಇತ್ತು. ಆದರೆ ಈತ ಜುವೆಂಟಸ್ ಕ್ಲಬ್ ಪಾಲಾಗಲು ನಿರ್ಧರಿಸಿದ. ಐದು ವರ್ಷಗಳ ಅವಧಿಗೆ ಡಿ ಲಿಗ್ಟ್‌ನನ್ನು ತನ್ನ ಆಟಗಾರರ ಪಟ್ಟಿಗೆ ಸೇರಿಸಿಕೊಂಡಿದೆ.

ನೆದರ್‌ಲೆಂಡ್‌ನಲ್ಲಿ 12–08–1999ರಲ್ಲಿ ಜನಿಸಿದ ಡಿ ಲಿಗ್ಟ್, ರಾಷ್ಟ್ರೀಯ ತಂಡದ ಸೆಂಟರ್ ಬ್ಯಾಕ್ ಆಟಗಾರನಾಗಿ ಜನಪ್ರಿಯ. 2017ರಲ್ಲಿ ತನ್ನ 17ರ ಹರೆಯದಲ್ಲೇ ನೆದರ್‌ಲೆಂಡ್ ರಾಷ್ಟ್ರೀಯ ತಂಡಕ್ಕೆ ಆಯ್ಕೆಯಾದಾತ ಈತ. 1931ರ ಬಳಿಕ ರಾಷ್ಟ್ರೀಯ ತಂಡವೊಂದರಲ್ಲಿ ಸ್ಥಾನ ಪಡೆದ ಅತ್ಯಂತ ಕಿರಿಯ ವಯಸ್ಸಿನ ಆಟಗಾರ ಎಂಬ ಕೀರ್ತಿ ಆಗ ಆತನದ್ದಾಗಿತ್ತು. ಈಗ ಯೂರೋಪಿನ ಅತ್ಯಂತ ದುಬಾರಿ ಆಟಗಾರ ಎಂಬ ಹೆಗ್ಗಳಿಕೆಯೂ ಸೇರಿಕೊಂಡಿದೆ.

'ಅಜಾಕ್ಸ್ ತಂಡವನ್ನು ಬಿಡುವುದು ಕಷ್ಟದ ನಿರ್ಧಾರವೇ ಆಗಿದೆ. ಕಳೆದ 10 ವರ್ಷಗಳಿಂದ ಇಲ್ಲೇ ಆಡಿ ಬೆಳೆದವನು. ಆದರೆ ನನಗೆ ಹಿಂದಿನಿಂದಲೂ ಇಟಲಿಯನ್ನರ ಡಿಫೆನ್ಸ್ ಆಟದ ಶೈಲಿ ಇಷ್ಟ. ಬರೆಸಿ, ಮಾಲ್ದಿನಿ, ನೆಸ್ತಾ, ಕನ್ನಾವರೊ ಮುಂತಾದ ಇಟಾಲಿಯನ್ ಆಟಗಾರರು ನನ್ನ ಮೆಚ್ಚಿನ ಆಟಗಾರರೂ ಹೌದು' ಎಂದಿದ್ದಾನೆ ಡಿ ಲಿಗ್ಟ್. ಈಗ ಜುವೆಂಟಸ್‌ನಲ್ಲಿ ಒಂದು ಸೀಸನ್‌ಗೆ 75 ಲಕ್ಷ ಯೂರೊ ಈತನ ಮೂಲ ವೇತನ. ಬೋನಸ್, ಇನ್ಸೆಂಟಿವ್ ಎಲ್ಲವೂ ಸೇರಿದರೆ ಒಟ್ಟು 1.2 ಕೋಟಿ ಯೂರೋ ಈತನ ಸಂಭಾವನೆ. ಐದು ವರ್ಷದ ಕಾಂಟ್ರಾಕ್ಟ್. ಮೂರನೇ ವರ್ಷದ ಬಳಿಕ ಯಾರಾದರೂ ಖರೀದಿ ನಡೆಸುವುದಾದರೆ ಜುವೆಂಟಸ್‌ಗೆ 15 ಕೋಟಿ ಯೂರೋ ಪಾವತಿಸಬೇಕು. ಈತನ ವರ್ಗ ವಹಿವಾಟಿನಲ್ಲಿ ಈತನ ಏಜೆಂಟ್ ಮಿನೊ ರೈವೊಲಾಗೆ 1 ಕೋಟಿ ಯೂರೊ ಕಮಿಷನ್ ಸಿಕ್ಕಿದೆ ಎಂದರೆ, ಈ ವರ್ಗಾವಣೆ ಎಷ್ಟು ದುಬಾರಿ ಎನ್ನುವುದನ್ನು ಅರ್ಥ ಮಾಡಿಕೊಳ್ಳಬಹುದು.

■ ಬಿಂದು

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65